DECEMBER 12, 2025

**AKASHAVANI - DHARWAD**

**PRADESH SAMACHARA (KANNADA) 12.00 P.M.**

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

**<><><>**

**ಗ್ರಾಮ ಪಂಚಾಯ್ತಿ, ತಾಲೂಕು ಮತ್ತು** ಜಿಲ್ಲಾ ಪಂಚಾಯ್ತಿ ಸೇರಿದಂತೆ, ವಿವಿಧ ಪುರಸಭೆ ಹಾಗೂ ನಗರಸಭೆ ಸೇರಿ, 6 ಸಾವಿರದ ಐನೂರಕ್ಕೂ ಹೆಚ್ಚು, ನಗರ ಮತ್ತು ಗ್ರಾಮೀಣ, ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು, 2026ರ ಏಪ್ರಿಲ್‌ನಲ್ಲಿ ನಡೆಸಲು, ಎಲ್ಲ ರೀತಿಯ ಸಿದ್ಧತೆ ಕೈಗೊಳ್ಳಲು, ಸಚಿವ ಸಂಪುಟ ತೀರ್ಮಾನಿಸಿದೆ. ತ್ವರಿತವಾಗಿ ಚುನಾವಣೆ ನಡೆಸುವಂತೆ, ನ್ಯಾಯಾಲಯ ಸಹ, ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದೆ. ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ, ಸಚಿವ ಸಂಪುಟ ಸಭೆಯಲ್ಲಿ, ಮತದಾರರ ಅಂತಿಮ ಪಟ್ಟಿ ಪರಿಷ್ಕರಿಸಿ, ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯನ್ನು, ಪುನರ್ ವಿಂಗಡಿಸಿ, ಚುನಾವಣೆ ಅಧಿಸೂಚನೆ ಹೊರಡಿಸಲು, ಸಂಪುಟ ಒಪ್ಪಿದೆ.

<><><>

**ಗ್ರೇಟರ್ ಬೆಂಗಳೂರು ಪ್ರಾಧಿಕಾರದ** ಮಾದರಿಯಲ್ಲೇ, ರಾಜ್ಯದ ಗ್ರಾಮ ಪಂಚಾಯ್ತಿಗಳ ವ್ಯಾಪ್ತಿಯಲ್ಲಿ, ಸ್ವಾಧೀನಾನುಭವ ಪ್ರಮಾಣಪತ್ರ (ಒ.ಸಿ.) ಪಡೆಯದ, ಸಾವಿರದ 200 ಚದರ ಅಡಿಗಳ, 30 ಬೈ 40 ನಿವೇಶನದಲ್ಲಿ ನಿರ್ಮಿಸಲಾದ, ವಸತಿ ಕಟ್ಟಡಗಳಿಗೆ, ವಿದ್ಯುತ್ ಮತ್ತು ನೀರಿನ ಸಂಪರ್ಕ ಪಡೆಯಲು, ಅವಕಾಶ ಕಲ್ಪಿಸಿ, ಸಚಿವ ಸಂಪುಟ ಅನುಮೋದಿಸಿದೆ.

<><><>

**ಯಾವುದೇ ವ್ಯಕ್ತಿ, ಕುಟುಂಬ ಅಥವಾ** ಕುಟುಂಬದ ಸದಸ್ಯರನ್ನು, ಸಾಮಾಜಿಕವಾಗಿ ಬಹಿಷ್ಕರಿಸಿದಲ್ಲಿ, ಅಪರಾಧ ಎಂದು ಪರಿಗಣಿಸಿ, 1 ಲಕ್ಷ ರೂಪಾಯಿ ದಂಡ ಹಾಗೂ 3 ವರ್ಷಗಳ ವರೆಗೆ, ಜೈಲು ಶಿಕ್ಷೆಗೆ ಗುರಿ ಪಡಿಸಲು ಅವಕಾಶವಿರುವ, ಕರ್ನಾಟಕ ಸಾಮಾಜಿಕ ಬಹಿಷ್ಕಾರ ಪ್ರತಿಬಂಧ, ನಿಷೇಧ ಮತ್ತು ಪರಿಹಾರ ವಿಧೇಯಕ –2025ನ್ನು, ಸಮಾಜ ಕಲ್ಯಾಣ ಖಾತೆ ಸಚಿವ, ಎಚ್.ಸಿ. ಮಹದೇವಪ್ಪ, ವಿಧಾನಸಭೆಯಲ್ಲಿ ಮಂಡಿಸಿದ್ದಾರೆ. ಪರ್ಯಾಲೋಚನೆ ಬಳಿಕ, ಈ ಮಸೂದೆ, ಉಭಯ ಸದನಗಳಲ್ಲಿ ಅಂಗೀಕರಿಸಬೇಕಿದೆ.

<><><>

**ನಗರದ ಸ್ವಚ್ಛತೆಗಾಗಿ, ಹಗಲಿರುಳು ಶ್ರಮಿಸುವ** ಪೌರಕಾರ್ಮಿಕರ ಆರೋಗ್ಯ ರಕ್ಷಣೆಗೆ, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ಮಾದರಿ ಹೆಜ್ಜೆ ಇರಿಸಿದೆ. ವಲಯ ಕಚೇರಿ 3ರ ವ್ಯಾಪ್ತಿಯಲ್ಲಿ, ಪೌರಕಾರ್ಮಿಕರಿಗಾಗಿಯೇ, "ಕ್ಯಾನ್ಸರ್ ತಪಾಸಣಾ ಶಿಬಿರ" ಆಯೋಜಿಸಲಾಗಿತ್ತು. ಖಾಸಗಿ ಆಸ್ಪತ್ರೆಗಳಲ್ಲಿ ಅಂದಾಜು, 40 ರಿಂದ 50 ಸಾವಿರ ರೂಪಾಯಿ ವೆಚ್ಚವಾಗಬಹುದಾದ, ಸಂಪೂರ್ಣ ಕ್ಯಾನ್ಸರ್ ತಪಾಸಣೆಯನ್ನು, ಪಾಲಿಕೆ ವತಿಯಿಂದ, ಪೌರಕಾರ್ಮಿಕರಿಗೆ ಸಂಪೂರ್ಣ ಉಚಿತವಾಗಿ ಒದಗಿಸಲಾಗಿದೆ. ಬೆಂಗಳೂರಿನ, ಕರ್ನಾಟಕ ಕ್ಯಾನ್ಸರ್ ಸಂಸ್ಥೆ, ಧಾರವಾಡ ಜಿಲ್ಲೆ, ಹುಬ್ಬಳ್ಳಿ ಬಳಿಯ, ನವನಗರ, ಕರ್ನಾಟಕ ಕ್ಯಾನ್ಸರ್ ಸಂಶೋಧನೆ ಮತ್ತು ಆಸ್ಪತ್ರೆ ಹಾಗೂ ರೆಡ್ ಕ್ರಾಸ್ ಸಂಸ್ಥೆ ಧಾರವಾಡ ಘಟಕದ ವತಿಯಿಂದ, 75ಕ್ಕೂ ಹೆಚ್ಚು ಮಹಿಳಾ ಹಾಗೂ ಪುರು ' ಪೌರಕಾರ್ಮಿಕರ ಆರೋಗ್ಯದ ತಪಾಸಣೆ ಕೈಗೊಳ್ಳಲಾಯಿತು.

<><><>

**63ನೇ ನಾಗರಿಕ ರಕ್ಷಣಾ ದಿನದ ಅಂಗವಾಗಿ,** ನೈರುತ್ಯ ರೇಲ್ವೆ ವಲಯದ, ಹುಬ್ಬಳ್ಳಿ ಕಾರ್ಯಾಗಾರದಲ್ಲಿ, ನಾಗರಿಕ ರಕ್ಷಣಾ ತಂಡ, 'ವಿಪತ್ತು ನಿರ್ವಹಣೆಯಲ್ಲಿ, ಗೋಲ್ಡನ್ ಅವರ್ ಪರಿಕಲ್ಪನೆ– ಸನ್ನಿವೇಶ; ಸಬೋಟೇಜ್ ಬಾಂಬ್ ಸ್ಫೋಟ' ಕುರಿತು, ಅಣಕು ಕಾರ್ಯಾಚರಣೆ ನಡೆಸಿತು. ಕಾರ್ಯಾಗಾರದ ಮುಖ್ಯ ರಕ್ಷಣಾ ನಿರೀಕ್ಷಕ ರಂಜನ್‌ಕುಮಾರ ಸಾಹು, ಮುಖ್ಯ ಕಾರ್ಯಾಗಾರದ ವ್ಯವಸ್ಥಾಪಕ, ವಿಜಯ ಸಿಂಗ್ ಯಾದವ್, ನೈರುತ್ಯ ರೇಲ್ವೆ, ಉಪ ಪ್ರಧಾನ ವ್ಯವಸ್ಥಾಪಕ, ಕುಲದೀಪ್ ಪಾಲ್ಗೊಂಡಿದ್ದರು.

<><><>

**ಮಾಜಿ ಮುಖ್ಯಮಂತ್ರಿ ಜೆ.ಎಚ್.ಪಟೇಲರ** ಪುಣ್ಯತಿಥಿ ಇಂದು. ಉಪ ಮುಖ್ಯಮಂತ್ರಿ, ಡಿ.ಕೆ. ಶಿವಕುಮಾರ, ಎಕ್ಸ್ ಮಾಧ್ಯಮದಲ್ಲಿ ಗೌರವ ನಮನ ಸಲ್ಲಿಸಿದ್ದಾರೆ. ಜೆ.ಎಚ್. ಪಟೇಲರ, ನೇರ ನುಡಿಯ ವ್ಯಕ್ತಿತ್ವ ಮತ್ತು ನಾಡಿನ ಅಭಿವೃದ್ಧಿಯ ದೂರದೃಷ್ಟಿ ಎಂದಿಗೂ ಸ್ಮರಣೀಯ ಎಂದಿದ್ದಾರೆ.

<><><>

**ಮುಂಬರುವ 7 ದಿನಗಳ ಕಾಲ,** ರಾಜ್ಯಾದ್ಯಂತ ಒಣ ಹವೆ ಮುಂದುವರಿಯಲಿದೆ ಎಂದು, ಹವಾಮಾನ ಇಲಾಖೆ, ಮುನ್ಸೂಚನೆ ನೀಡಿದೆ. ರಾತ್ರಿ ವೇಳೆ, 10 ಡಿಗ್ರಿ ಸೆಲ್ಶಿಯಸ್ ಹಾಗೂ ಬೆಳಗ್ಗೆ ಚಳಿ, ಅಲ್ಲಲ್ಲಿ ಮಂಜಿನ ವಾತಾವರಣ ಮುಂದುವರೆಯಲಿದೆ ಎಂದು, ಬೆಂಗಳೂರು ಹವಾಮಾನ ಕೇಂದ್ರದ ವಿಜ್ಞಾನಿ, ಸಿ.ಎಸ್. ಪಾಟೀಲ, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.

<><><>

**ವಿಜ್ಞಾನಿ, ಸಿ.ಎಸ್. ಪಾಟೀಲ ಧ್ವನಿ 40 ಸೆಕೆಂದುಗಳು**

<><><>

**ಧಾರವಾಡ ಜಿಲ್ಲೆ, ಹುಬ್ಬಳ್ಳಿಯ,** ಸಂಗಮೇಶ ಹಂಡಿಗಿ ಸಾಹಿತ್ಯ ಪ್ರತಿಷ್ಠಾನದ, 'ಸಂಗಮ ಸಿರಿ' ರಾಜ್ಯ ಪ್ರಶಸ್ತಿಗೆ, ಕೇಂದ್ರ ಸಾಹಿತ್ಯ ಅಕಾದೆಮಿ ಸದಸ್ಯ, ಮಾಧ್ಯಮ ತಜ್ಞ, ಡಾಕ್ಟರ್ ಬಸವರಾಜ ಸಾದರ ಹಾಗೂ ವಿಜ್ಞಾನಿ, ಡಾಕ್ಟರ್ ಶಶಿಕಾಂತ ಪಟ್ಟಣ ಅವರನ್ನು ಆಯ್ಕೆ ಮಾಡಲಾಗಿದೆ ಎಂದು, ಪ್ರತಿಷ್ಠಾನದ ಅಧ್ಯಕ್ಷ, ಜಿ.ಬಿ. ಗೌಡಪ್ಪಗೋಳ, ತಿಳಿಸಿದ್ದಾರೆ. ಬರುವ 28ನೇ ತಾರೀಖು, ಹುಬ್ಬಳ್ಳಿಯಲ್ಲಿ, ಪ್ರಶಸ್ತಿ ಪ್ರದಾನ ಸಮಾರಂಭ, ನಡೆಯಲಿದೆ.

<><><>

**ಧಾರವಾಡ ಜಿಲ್ಲೆ, ಹುಬ್ಬಳ್ಳಿಯ,** ಕೆ.ಎಲ್.ಇ. ತಾಂತ್ರಿಕ ವಿಶ್ವವಿದ್ಯಾಲಯದ, 7ನೇ ಘಟಿಕೋತ್ಸವ, ನಾಳೆ 13 ರಂದು, ಬೆಳಗ್ಗೆ 11.30ಕ್ಕೆ, ಪ್ರಭಾಕರ ಕೋರೆ ಕ್ರೀಡಾಂಗಣದಲ್ಲಿ, ನಡೆಯಲಿದೆ. ಒಟ್ಟು 2 ಸಾವಿರದ ನೂರ 31 ಪದವಿ ವಿದ್ಯಾರ್ಥಿಗಳು, 311 ಸ್ನಾತಕೋತ್ತರ ವಿದ್ಯಾರ್ಥಿಗಳು, 24 ಜನ ಪಿ.ಎಚ್.ಡಿ. ಪದವಿ ಪಡೆಯಲಿದ್ದಾರೆ ಎಂದು, ಪ್ರೋ ಚಾನ್ಸಲರ್ ಅಶೋಕ ಶೆಟ್ಟರ್, ತಿಳಿಸಿದ್ದಾರೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.**